# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ 868 /2026-27 ದಿನಾಂಕ:05.08.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ,
ಕರ್ನಾಟಕ.

**ಮಾನ್ಯರೆ,**

ವಿಷಯ:- "ವಿದುರಾಶ್ವತ್ಥ ನಡಿಗೆ-ಸ್ವಾತಂತ್ರ್ಯ ಸೇನಾನಿಗಳಿಗೆ ನಮನ" ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವಂತೆ ಕೋರಿ.

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆಗಳ ಆಶ್ರಯದಲ್ಲಿ ರಾಜ್ಯ ಮಟ್ಟದ "ವಿದುರಾಶ್ವತ್ಥ ನಡಿಗೆ-ಸ್ವಾತಂತ್ರ್ಯ ಸೇನಾನಿಗಳಿಗೆ ನಮನ" ಕಾರ್ಯಕ್ರಮವನ್ನು ದಿನಾಂಕ:15.09.2026 ರಿಂದ 19.09.2026 ರವರೆಗೆ ಆಯೋಜಿಸಲಾಗಿದೆ. ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ರಾಜ್ಯ ಮಟ್ಟದ "ವಿದುರಾಶ್ವತ್ಥ ನಡಿಗೆ-ಸ್ವಾತಂತ್ರ್ಯ ಸೇನಾನಿಗಳಿಗೆ ನಮನ" ಕಾರ್ಯಕ್ರಮ |
| ದಿನಾಂಕ | 15 ರಿಂದ 19 ಸೆಪ್ಟಂಬರ್ 2026 ರವರೆಗೆ |
| ಸ್ಥಳ | ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ಪ್ರಾರಂಭ ಮತ್ತು ವಿದುರಾಶ್ವತ್ಥ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಕ್ತಾಯ |
| ನೊಂದಾವಣಿ ದಿನಾಂಕ, ಸಮಯ & ಸ್ಥಳ | 15.09.2026 ರಂದು ಬೆಳಗ್ಗೆ 9.00 ಗಂಟೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು-560001 ಇಲ್ಲಿ ಹಾಜರಾಗುವುದು. |
| ಬಿಡುಗಡೆ ದಿನಾಂಕ | 19.09.2026 ರಂದು ಸಂಜೆ 4 ಗಂಟೆಗೆ ವಿದುರಾಶ್ವತ್ಥ, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಬಿಡುಗಡೆಗೊಳಿಸಲಾಗುವುದು. |
| ಯಾರು ಭಾಗವಹಿಸುವುದು. | ಉತ್ತಮ ದೈಹಿಕ, ಮಾನಸಿಕ, ಭಾವನಾತ್ಮಕ, ಸದೃಢ ಮತ್ತು ಆರೋಗ್ಯವಾಗಿರುವ ಪ್ರತಿ ದಿನ 15 ಕಿ.ಮೀ ಕಾಲ್ನಡಿಗೆಯಲ್ಲಿ ನಡೆಯಲು ಶಕ್ತರಾಗಿರುವ ಪ್ರತಿ ಜಿಲ್ಲೆಯಿಂದ 2 ರೋವರ್ಸ್ ಮತ್ತು 2 ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿರುತ್ತದೆ. |
| ಕಾರ್ಯಕ್ರಮದ ವಿವರಗಳು | ದಿನಾಂಕ:15.09.2026 ರಂದು ವಿಧಾನಸೌದದ ಮುಂಭಾಗದಲ್ಲಿ ಉದ್ಘಾಟನೆಯ ನಂತರ, ಎಲ್ಲಾ ಶಿಬಿರಾರ್ಥಿಗಳು ವಿಧಾನಸೌದದಿಂದ ಹೊರಟು ಯಲಹಂಕ, ರಾಜನಕುಂಟೆ, ದೊಡ್ಡಬಳ್ಳಾಪುರ, ಘಾಟಿ, ತೊಂಡೆಬಾವಿ ಮಾರ್ಗವಾಗಿ ರಾಷ್ಟ್ರೀಯ ಘೋಷಣೆಗಳು, ದೇಶಪ್ರೇಮ, **ಸ್ಕೌಟ್-ಗೈಡ್ ಘೋಷಣೆಯೊಂದಿಗೆ** ಕಾಲ್ನಡಿಗೆಯಲ್ಲಿ ನಡೆದು ದಿನಾಂಕ:18.09.2026ರ ಸಂಜೆ ವಿದುರಾಶ್ವತ್ಥ, ಚಿಕ್ಕಬಳ್ಳಾಪುರ ಜಿಲ್ಲೆಗೆ ತಲುಪಲಾಗುವುದು. ಅದೇ ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. |

| | |
|---|---|
| | ದಿನಾಂಕ:19.09.2026 ರಂದು ಶ್ರಮದಾನ ಹಾಗೂ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗುವುದು ಹಾಗೂ ಸಂಜೆ 4 ಗಂಟೆಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಗುವುದು. |
| ಕಾರ್ಯಕ್ರಮದ ವ್ಯವಸ್ಥೆ | ಕಾರ್ಯಕ್ರಮದಲ್ಲಿ ಊಟೋಪಚಾರ ಹಾಗೂ ವಸತಿ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಲಾಗಿದೆ. ಯಾವುದೇ ಶಿಬಿರ ಶುಲ್ಕ ಇರುವುದಿಲ್ಲ. |
| ಪ್ರಯಾಣ ವೆಚ್ಚ | ಕಾರ್ಯಕ್ರಮಕ್ಕೆ ತಮ್ಮ ಸ್ಥಳದಿಂದ ಶಿಬಿರ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಆಯಾಯ ಕಾಲೇಜಿನ ರೋವರ್-ರೇಂಜರ್ ನಿಧಿಯಿಂದ ಭರಿಸುವುದು. |
| ತರಬೇಕಾದ ಸಾಮಾಗ್ರಿಗಳು | ಎ.ಪಿ.ಆರ್.ಒ ಭಾಗ 2 ಮತ್ತು 3ರ ನಿಯಮಾನುಸಾರ ಸಂಪೂರ್ಣ ಹಾಗೂ ಸರಿಯಾದ ಸಮವಸ್ತ್ರ, ಚಾರಣಕ್ಕೆ ಅಗತ್ಯವಿರುವ ಹೆಚ್ಚುವರಿ ಧರಿಸುವ ಬಟ್ಟೆಗಳು, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಗತ್ಯವಾದ ವೇಷಭೂಷಣಗಳು, ಸ್ಲೀಪಿಂಗ್ ಬ್ಯಾಗ್, ಸ್ವೆಟರ್, ಛತ್ರಿ, ರೈನ್ ಕೋಟ್, ಕ್ರೀಡಾ ಶೂಗಳು, ವೈಯಕ್ತಿಕ ಬಳಕೆಯ ಸ್ವಚ್ಛತಾ ಸಾಮಾಗ್ರಿಗಳು, ಪ್ರಥಮ ಚಿಕಿತ್ಸೆ ಕಿಟ್, ಇತ್ಯಾದಿ |
| ರಿಸ್ಕ್ ಸರ್ಟಿಫಿಕೇಟ್ | ಭಾಗವಹಿಸುವ ರೋವರ್ಸ್-ರೇಂಜರ್ಸ್‌ಗಳು ತಮ್ಮ ಪೋಷಕರು & ಕಾಲೇಜಿನಿಂದ ಅನುಮತಿ ಪಡೆದು ಅರ್ಜಿ ನಮೂನೆ ಮತ್ತು ರಿಸ್ಕ್ ಸರ್ಟಿಫಿಕೇಟ್ ಅನ್ನು ನೊಂದಾವಣಿಯ ಸಮಯದಲ್ಲಿ ಸಲ್ಲಿಸುವುದು. |
| ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ- 9448914540<br>ಶ್ರೀ ಗಿರಿಧರ್, ಜಿಲ್ಲಾ ಕಾರ್ಯದರ್ಶಿ, ಚಿಕ್ಕಬಳ್ಳಾಪುರ- 9740391787<br>ಶ್ರೀ ವಿಶ್ವನಾಥ್.ವಿ, ಡಿ.ಒ & ಐ.ಟಿ ತಂಡ- 9902890534 |
| ಆನ್‌ಲೈನ್‌ನಲ್ಲಿ ನೊಂದಾವಣಿ | https://zfrmz.in/RLT2isqSsK9RlgLON6t3 |

ಆದ್ದರಿಂದ, ಮೇಲ್ಕಂಡ ಕಾರ್ಯಕ್ರಮಕ್ಕೆ ತಮ್ಮ ಜಿಲ್ಲೆಯಿಂದ ಆಸಕ್ತ 2 ರೋವರ್ಸ್ ಮತ್ತು 2 ರೇಂಜರ್ಸ್‌ಗಳನ್ನು ನಿಯೋಜಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ಭಾಗವಹಿಸುತ್ತಿರುವ ರೋವರ್ಸ್-ರೇಂಜರ್ಸ್‌ಗಳ ವಿವರವನ್ನು ದಿನಾಂಕ:31.08.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ವಿನಂತಿಸಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ